Regd No M. 1299

॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥

ಬಿಡಿ ಪ್ರತಿ 3 ಪೈ

ಸತ್ಯವಾದಿ

ವಾರಪತ್ರಿಕೆ

ಸ್ಥಳಕ್ಕೆ
ವರ್ಷಕ್ಕೆ ರೂ. 1—0—0

ಪರಸ್ಥಳಕ್ಕೆ
ವರ್ಷಕ್ಕೆ ರೂ. 1—10—0

(ಮೈಸೂರು ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) (ಮುನಿಯೂಡರ್ ಮೂಲಕ)

ಪ್ರತಿ ಬುಧವಾರ ಪ್ರಕಟಿಸಲ್ಪಡುವದು

ಸಂಪುಟ 17] ಮೈಸೂರು, ಬುಧವಾರ 27 ನೆ ಮಾರ್ಚಿ 1935 [ಸಂಚಿಕೆ 24

ಮೈಸೂರು ಎಸ್. ಎನ್. ಪಂಡಿತರ

ಬಿಳ್ಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳ್ಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ ಕ್ಕೆ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹೊಳುಮಾಡತಕ್ಕ ಟಾರ್‌ಟರ್ (ದಂತ ತಕ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿಪರಿಕ್ಷಿಸಿ ನೋಡಬೇಕಾದ್ದು. ಟಿ ಕ್ಕೆ 1 ಕ್ಕೆ 5 ಆಣೆ.

[ಪರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷ್ ಕೊಡಲ್ಪಡುವದು. ನಮ್ಮಲ್ಲಿ ಎಲ್ಲಾವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎಸ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು :
ಮಿ| ಜಿ. ಎಸ್. ವೆಂಕಟರಾವ್

ಅಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,
ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,
ಅಥವ ಧೂಳು ಮತ್ತು ಬಿಸಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನ್ನು
ಯಥಾಸ್ಥಿತಿಗೆ ತರಲು
ಮೈಸೂರು ಗಂಧದ ಸಾಬೂನಿನ
ಶಕ್ತಿವರ್ಧಕ ಸ್ನಾನಕ್ಕಿಂತ
ಸರಿಸಮವಾದುದು ಮತ್ತೊಂದೂ ಇಲ್ಲ

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

Bravo Institute of Commerce
RAMAVILAS AGRAHAR, MYSORE

All Commercial Subjects are taught at moderate fees. "Cent per Cent" passes of the Candidates in I.P.S., L.C.C. and Pitman's Examinations are evidences of efficient tuition.

Typewriting Jobs undertaken at most moderate charges

Special arrangements have been made for separate accomadation and classes of the Ladies Section alone.

H. V. Anantharamiah, M.I.P.S. (Lond) D.Com. (I.M.C.)
Principal & Founder

ಸತ್ಯವಾದಿ

ಕರಾಚಿಯಲ್ಲಿ ಗಲಭೆ

ಕಳೆದ ಸೆಪ್ಟಂಬರ್ ತಿಂಗಳಲ್ಲಿ ನಥುರಾಂ ಎಂಬ ಹಿಂದೂವನ್ನು ಜೂಡಿಷಿಯಲ್ ಕಮಿಷನರ್ ಕೋರ್ಟಿನಲ್ಲಿ ತಿನಿದು ಕೊಂದದ್ದಕ್ಕಾಗಿ ಮರಣಶಿಕ್ಷೆಯು ವಿಧಿಸಲ್ಪಟ್ಟ ಅಬ್ದುಲ್ ಕಯಾಮಿನ ಶವವನ್ನು 19 ನೇ ತಾರೀಖಿನ ದಿವಸ ಗಲ್ಲಿಫೆ ಹಾಕಿದುದರಿಂದಲೇ ಈ ಗಲಭೆಗಳು ಉಂಟಾದವು. ಗಲ್ಲಿಗೇರಿಸಲ್ಪಟ್ಟವರ ಕಳೇಬರವನ್ನು ಅವನ ನಾಟರಿಗೆ ಕೊಟ್ಟು ಪೋಲೀಸಿನವರು ಉಸ್ತುವಾರಿಯಿಂದ ಒಂದು ಸ್ಥಳದಲ್ಲಿ ಸದರೀ ಅಬ್ದುಲ್ ಕಯಾಮಿನ ಶವವನ್ನು ಸಮಾಧಿಮಾಡಿದರು. ಈ ಸಮಾಚಾರವು ಊರಿನಲ್ಲಿ ಕಾಡ್ಗಿಚ್ಚಿನಂತೆ ಹರಡಿ ಸಾವಿರಾರು ಮಂದಿ ಮುಸಲ್ಮಾನರು ಅಲ್ಲಿಗೆ ಬಂದು, ಶವವನ್ನು ತೆಗೆದು ಹತ್ತಿರಿದ್ದ ಮೈದಾನಕ್ಕೆ ಕೊಂಡೊಯ್ದು, ಆತನ ಆತ್ಮಕ್ಕೆ ಶಾಂತಿದೊರೆಯಲು ಪ್ರಾರ್ಥನೆ ಮಾಡಿದರು.

ಅನಂತರ ಮೃತರ ಕಳೇಬರವನ್ನು ಊರಿನಲ್ಲೆಲ್ಲಾ ಮೆಗವಣಿಗೆ ಮಾಡಲು ಹೊರಟರು. ಪೋಲೀಸಿನವರು ಇದನ್ನು ಪ್ರತಿಬಂಧಿಸಿದರು. ಅವರ ಆಜ್ಞೆಯನ್ನು ಉಲ್ಲಂಘಿಸಿದರು. ಪೋಲೀಸು ಸಿಬ್ಬಂದಿಯು ಈ ಗುಂಪನ್ನು ಹತೋಟಿಗೆ ತರಲು ಸಾಲದೇ ಇದ್ದದರಿಂದ, ಮಿಲಿಟರಿ ಸಹಾಯ ತರಿಸಲ್ಪಟ್ಟಿತು. ಗಲಭೆಯನ್ನು ಅಡಗಿಸಲು ಎಲ್ಲ ಪ್ರಯತ್ನಗಳೂ ನಿಷ್ಫಲವಾಗಲು ಮಿಲಿಟರಿಯವರು ಗುಂಡುಹಾರಿಸಿದರೆಂದೂ, ಸುಮಾರು 30 ಮಂದಿ ಮರಣಹೊಂದಿ, 100 ಮಂದಿ ಘಾಯ ಹೊಂದಿದರೆಂದು ತಿಳಿಯಬಂದಿದೆ. ಬಂದೂಕನ್ನು ಹಾರಿಸಿದ್ದರಿಂದ ಗುಂಪು ಚದರಿಸಲ್ಪಟ್ಟಿತೆಂದೂ, ಶವವನ್ನು ಪೂರ್ವದಲ್ಲಿ ಏರ್ಪಟ್ಟಿದ್ದ ಸ್ಥಳದಲ್ಲಿಯೇ ಸಮಾಧಿಮಾಡಲಾಯಿತೆಂದೂ, ಈಗ ಅಲ್ಲಿ ಪರಿಸ್ಥಿಯು ಶಾಂತವಾಗಿದೆಯೆಂದೂ, ಆದರೆ ಇನ್ನೂ ಪೋಲೀಸಿನವರು ಪುನಃ ಹೀಗಾದೀತೆಂದು ಜಾಗ್ರತೆಯಿಂದಿರುಸರೆಂದೂ, ತಿಳಿಯಬಂದಿದೆ.

ಈ ಸಂದರ್ಭದಲ್ಲಿ ಇಂಡಿಯಾ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲೂ, ಲಂಡನ್ ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಹಾಕಲ್ಪಟ್ಟಿತು.

ಕರಾಚಿಯ ಹಿಂದೂ ಮಹಾಸಭಾ ಪುರ ಪ್ರಮುಖರೂ ಸರ್ಕಾರದವರೂ ಸಹಕರಿಸಿ, ಹೆಚ್ಚು ಮುತುವರ್ಜಿಯಿಂದ ಜನರಲ್ಲಿ ಕ್ಷೀಪ್ರದಲ್ಲಿ ಶಾಂತಿ ನೆಲೆಗೊಳ್ಳಲೂ, ಮತಕಲಹಗಳು ಅಡಗಲೂ, ಪ್ರಯತ್ನಿಸಲೆಂದು ಕೋರುತ್ತೇವೆ.

ದತಿಯಾ ಸಂಸ್ಥಾನದ ಮಹಾರಾಜರು ರಾಜಧಾನಿಗೆ ದಯಮಾಡಿಸಿರುವರೆಂದೂ, ಕೆಲವು ದಿವಸಗಳು ಇಲ್ಲಿರುವರೆಂದು ತಿಳಿಯಬಂದಿದೆ.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಪ್ರೆಸಿಡೆಂಟರಾಗಿಯೂ, ಟ್ರಸ್ಟ್‌ಬೋರ್ಡಿಗೆ ಛೇರ್‌ಮೆನ್‌ರಾಗಿಯೂ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಎಂ. ಎ. ಶ್ರೀನಿವಾಸರವರು ನಿಯಮಿಸಲ್ಪಟ್ಟಿರುವರು.

ವಿವಿಧ ವಿಷಯಗಳು

600 ಸಂತಾಲರನ್ನು ಈಚೆಗೆ ಶುದ್ಧಿಮಾಡಿ ಹಿಂದೂ ಮತಕ್ಕೆ ಸೇರಿಸಿಕೊಂಡರು.

ಇಂಗ್ಲೆಂಡಿನಲ್ಲಿ 1933 ರಲ್ಲಿ 4042 ಮಂದಿ ಗಂಡ ಹೆಂಡರ ವಿವಾಹವಿಚ್ಛೇದನೆಯಾಗಿರುತ್ತದೆ.

ಜರ್ಮನಿಯಲ್ಲಿ ಹಿಟ್ಲರ್‌ರ ಸ್ವಭಾವವು ಹೆಚ್ಚಿದಂದಿನಿಂದ ಅನೇಕ ವಾರ್ತಾಪತ್ರಿಕೆಗಳು ನಿಲ್ಲಿಸಲ್ಪಟ್ಟಿವೆ.

ಹಿಮಾಲಯದ ಬಣ್ಣದ ಬೆಕ್ಕುಗಳು ಮೂರನ್ನು ಲಂಡನ್ ಜೂವಿನಲ್ಲಿಟ್ಟಿರುವರು. ಅವರು ಶಾಕಾಹಾರಿಗಳು, ಮಾಂಸವನ್ನು ಸೋಕುವದಿಲ್ಲ.

ಬಲಿದ್ವೀಪದವರು ಜಾವಾದ್ವೀಪದ ಹಿಂದೂಗಳೆನ್ನಬಹುದು. ಜಾವಾದಲ್ಲಿ ಇಸ್ಲಾಂ ನೆಲೆಗೊಂಡಿದೆ. ಬಲಿ ದ್ವೀಪದವರು ಮಾತ್ರ ಇಂದಿಗೂ ಹಿಂದುಗಳಾಗಿಯೇ ಇರುವರು.

ಬರ್ಮಾ, ಸೈಯಾಂ ಮತ್ತು ಇಂಡೋಚೈನಾಗಳಿಂದ ಅಕ್ಕಿಯು ಹಡಗುಗಳಲ್ಲಿ ಕಲ್ಕತ್ತೆಗೆ ಬಂದು ಬೀಳುತ್ತಿರುವದರ ಸಲವಾಗಿ ಕಲ್ಕತ್ತೆಯ ಕೆಲವು ಗಿರಣಿಗಳನ್ನು ಮುಚ್ಚಿದರು.

ನ್ಯೂಜಿಲಂಡಿನಲ್ಲಿ ಒಬ್ಬ ಬಾಲಿಕೆಯು ಕಣ್ಣುಗಳನ್ನು ಮುಚ್ಚಿಕೊಂಡು ತೆರೆಸಲ್ಲಿನಿಂದ ಕಾಗದದ ಮೇಲೆ ಬರೆಯುವ ಚಿತ್ರಗಳನ್ನು ಕಂಡು ಅನೇಕರು ಆಶ್ಚರ್ಯಪಡುತ್ತಿರುವರು.

ಇಂಡಿಯಾಕ್ಕೆ ಸ್ವತಂತ್ರವನ್ನು ಕೊಟ್ಟರು ಬೊಂಬಾಯಿಯನ್ನು ಇಂಗ್ಲಿಷರು ತಮ್ಮ ವಶದಲ್ಲಿಟ್ಟುಕೊಂಡು ಅಲ್ಲಿ ತಮ್ಮ ಸೇನೆಯನ್ನಿಟ್ಟಿರಬೇಕೆಂದು ಕೆಲವರು ಆಂಗ್ಲೇಯರು ಭಾವಿಸುವರು.

ದೇಹದಲ್ಲಿ ಮೂಳೆಗಳು ಮುರಿದು ಹೋದಲ್ಲಿ ಆ ಮೂಲಕ ಮೂತ್ರದಲ್ಲಿ ಸಕ್ಕರೆಯ ಭಾಗವು ಹೆಚ್ಚಾಗುವದೆಂದೂ ತದ್ವಾರಾ ಅತಿಮೂತ್ರವ್ಯಾಧಿಯು ಪ್ರಾಪ್ತವಾಗುವದೆಂದೂ ಕಂಡುಹಿಡಿದಿರುವರು.

ಜಾತೀಯ ನಿರ್ಣಯದ ಬಗ್ಗೆ ತಮ್ಮ ಖಂಡನೆಯನ್ನು ಪ್ರಕಟಿಸಲು, ಇಂಗ್ಲೆಂಡಿನಲ್ಲಿ ಪಂಡಿತ ಪಾಲ ಎಂಬವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ಏಪ್ರಿಲ್ 11 ಕ್ಕೆ ಹಿಂದೂಸ್ಥಾನದಿಂದ ಹೊರಡುವುದೆಂದು ತಿಳಿಯಬಂದಿದೆ.

ಪ್ರಾತಃಕಾಲಕ್ಕಿಂತ ಮಧ್ಯಾಹ್ನ ಕಾಲದಲ್ಲಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳಲ್ಲಿ ಕೆಲಸಗಳನ್ನು ಚೆನ್ನಾಗಿ ಮಾಡುತ್ತಿರುವರೆಂದು ಅಮೇರಿಕದ ಯೂನಿವರ್ಸಿಟಿ ಪ್ರೊಫೆಸರಾದ ಹಾರಿಮೈಲ್ಸ್‌ರವರು ಅಭಿಪ್ರಾಯಪಟ್ಟಿರುವರು.

ಸಿಕಿಂದರಾಬಾದಿನಲ್ಲಿನ ಪ್ರಖ್ಯಾತ ಧನವಂತರಾದ ಸರ್ ಒನ್ಸಿಲಾಲರು ದ್ವೈವಾಧೀನರಾದರು. ಇವರು 25 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹಣವನ್ನು ದೇವಸ್ಥಾನ ಆಸ್ಪತ್ರೆ ಮುಂತಾದುವುಗಳಿಗೆ ದಾನ ಮಾಡಿರುತ್ತಾರೆ.

ಬಲಿದ್ವೀಪದ ಹೆಂಗಸರು ಬಹಳ ಕಷ್ಟಪಡುವಂಥವರು, ಬೇಸಾಯವನ್ನು ಮಾಡುವವರೂ ಅವರೇ. ಅವರು ಎಷ್ಟು ಕಷ್ಟಪಡುವರೆಂದರೆ, ಯಾವ ದೇಶದ ಗಂಡಸೂ ಅವರಿಗಿಂತ ಹೆಚ್ಚು ಕೆಲಸವನ್ನು ಮಾಡಲಾರನು ಎಂದು ಹೇಳಬಹುದು.

ಹೈದರಾಬಾದಿನ ಇಂಪೀರಿಯಲ್ ಪೋಸ್ಟಾಫೀಸಿನ ಬೀಗಗಳನ್ನು ಒಡದು, ಇನ್ಶೂರ್ ಫಾರ್ಸೆಲ್ ಮತ್ತು ನಗದಿಯಾಗಿ 45 ಸಾವಿರ ರೂಪಾಯಿಗಳನ್ನು ಯಾರೋ ಹಾಸಿಕೊಂಡು ಹೋಗಿದ್ದಾರೆ.

ಬ್ರಿಟೀಷು ದ್ವೀಪಗಳಲ್ಲಿ ಬಹಳ ಉದ್ದವಾದ ರೈಲಿನ ಸುರಂಗವು ಸರ್ರ್ ಸುರಂಗವು. ಇದರ ಉದ್ದ 4 ಮೈಲು 636 ಗಜ- ನದಿಯ ಕೆಳಗೆ ಎರಡು ವರೆ ಮೈಲು ಆಳದಲ್ಲಿದೆ. ಇದನ್ನು 1873ರಲ್ಲಿ ಆರಂಭಿಸಿ 1884 ರಲ್ಲಿ ಮುಗಿಸಿದರು.

ಭೂಮಿ, ಜಲ ಮತ್ತು ಆಕಾಶಗಳಲ್ಲಿ ಪ್ರಯಾಣ ಮಾಡುವ ಯಂತ್ರಗಳಲ್ಲಿ ಹೆಚ್ಚು ವೇಗವುಳ್ಳ ಯಂತ್ರಗಳನ್ನು ಮಾಡಬೇಕೆಂಬುದು ಇಟಲಿಯರ ಆಶೆ. ಗಂಟೆಗೆ 350 ಮೈಲು ಹೋಗಬಲ್ಲ ಕಾರನ್ನು ಈಚೆಗೆ ಇವರು ಕಂಡುಹಿಡಿದಿರುವರು.

ಹೊಸ ದೆಹಲಿಯ ಕಟ್ಟಡಗಳ ಕಟ್ಟಡದಲ್ಲಿ ಭಾಗಿಗಳಾಗಿದ್ದ ಕೂಲಿಗಾರರು ಆ ಮುನಿಸಿಪಾಲಿಟಿಯವರಿಂದ ಹೊರಡಿಸಲ್ಪಟ್ಟು ದೆಹಲಿ ಅಲಿಗಢ ರಸ್ತೆಯಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದರು. ಇವಕ್ಕೆ ಬೆಂಕಿಬಿದ್ದು 500 ಗುಡಿಸಲುಗಳು ಅಗ್ನಿಹೋತ್ರನ ಪಾಲಾದವು.

ಬಲಿದ್ವೀಪದವರಲ್ಲಿ ಒಂದು ವಿಚಿತ್ರವಾದ ಆಚರಣೆಯಿದೆ. ಮನೆಯಲ್ಲಿ ಕಿರಿಯರು ಸತ್ತಲ್ಲಿ ಅವರ ದೇಹವನ್ನು ಕೆಡದಂತೆ ಮಾಡಿ ಒಂದು ಸ್ಥಳದಲ್ಲಿ ಹೂತಿಟ್ಟಿರುತ್ತಾರೆ. ಯಾರಾದರೂ ಹಿರಿಯರು ಮರಣ ಹೊಂದಿದಾಗ ಅವರ ಹೆಣದೊಂದಿಗೆ ಮಿಕ್ಕ ಹೆಣಗಳೂ ಪ್ರೇತಭೂಮಿಗೆ ಅತಿ ವೈಭವದಿಂದ ಒಯ್ಯಲ್ಪಡುವವು.

ಹಿಂದೂಸ್ಥಾನದ ಸರ್ಕಾರದ ಲೆಜಿಸ್ಲೇಟಿವ್ ಖಾತೆಯ ಆಫಿಷಿಯೇಟಿಂಗ್ ಸೆಕ್ರೆಟರಿಯವರಾದ ಮ|| ಬಿನಗಲ್ಲಿ ನರಸಿಂಗರಾಯರನ್ನು ಕಲ್ಕತ್ತಾ ಹೈಕೋರ್ಟಿನ ಜಡ್ಜಿಯವರಾಗಿ ನಿಯಮಿಸಿರುವರು. ಇವರು ಕನ್ನಡಿಗರಾಗಿರುವುದರಿಂದ ಈ ವಾರ್ತೆ ಕನ್ನಡಿಗರಿಗೆ ಹೆಮ್ಮೆಯನ್ನುಂಟುಮಾಡತಕ್ಕದ್ದೇ ಆಗಿರುತ್ತದೆ ಎಂದರೆ ಅತಿಶಯೋಕ್ತಿಯಲ್ಲ.

ರಾಮಕೃಷ್ಣ ಪರಮಹಂಸರು ಹೇಳಿರುವಂತೆ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಹುಚ್ಚು. ಲಾಹೋರಿನಲ್ಲಿ 100 ವರ್ಷದ ಮುಸ್ಲಿಂ ಬೇಗಂ ಎಂಬ ಹೆಂಗಸೊಬ್ಬಳು. ಅವಳು ಇದುವರಿಗೂ 33 ವರ್ಷ ಜೈಲಿನಲ್ಲಿ ವಾಸಮಾಡಿರುವಳು. ಅವಳಿಗೆ ಕಳ್ಳತನದ ಹುಚ್ಚು. ಕೆಲವು ದಿವಸಗಳ ಹಿಂದೆ ಅವಳಿಗೆ ಜೈಲಿನಿಂದ ಬಿಡುಗಡೆಯಾಯಿತು. ಪುನಃ ಕದ್ದಳು. ಆದುದರಿಂದ ಅವಳಿಗೆ ಪುನಃ ಎರಡು ವರ್ಷದ ಕಠಿಣ ಶಿಕ್ಷೆಯನ್ನು ಅನುಭವಿಸಬೇಕಾಗಿದೆ.

ಹಿಟ್ಲರರಿಗೆ ಆರ್ಯರೆಂದರೆ ಪ್ರಾಣ, ಆರ್ಯೇತರ ಪದಾರ್ಥಗಳೆಂದರೆ ಪ್ರಾಣ. ಆತನಿಗೆ ಅನಾರ್ಯರೂ ಬೇಡ. ಆಪರ ವಸ್ತುಗಳೂ ಬೇಡ. ಇದರಿಂದ ಏನಾಗಿರುವದೆಂದರೆ :—ಇದುವರಿಗೂ ಕಿತ್ತಳೇ ಹಣ್ಣುಗಳು ಪ್ಯಾಲೆಸ್ಟೇಸಿನಿಂದ ಬರುತ್ತಿದ್ದವು 4 ಆಣೆಗೆ 1 ರಂತೆ ಸಿಗುತ್ತಿದ್ದವು. ಪ್ಯಾಲೆಸ್ಟೇಸಿನಿಂದ ಬರುವವು ಯಹೋದ್ಯರಿಂದ ಬೆಳೆಯಲ್ಪಟ್ಟ ಕಿತ್ತಳೇ ಹಣ್ಣುಗಳು ; ಜರ್ಮನಿಗೆ ಅವು ಬೇಡವಾಗಿವೆ. ಆದುದರಿಂದ ಈಗ ಅಲ್ಲಿ ಕಿತ್ತಳೇ ಹಣ್ಣೆಂದರೆ ಬಂಗಾರವಾಗಿದೆ.

ನಂದನ ಕಥೆ.

(ಹಿಂದಿನವಾರದಿಂದ ಮುಂದುವರಿದುದು.)

ಬೆಳಗಾಯಿತು. ಹೊಲೆಯರ ಹಳ್ಳಿಯಲ್ಲಿ ಯಾರೂ ಕೆಲಸದ ಮೇಲೆ ಹೋಗಲಿಲ್ಲ. ನಂದನ ಸ್ಥಿತಿಯ ವಿಚಾರದಲ್ಲಿ ಅವರಿಗೇನೂ ಮನಸ್ಸಿಗೆ ಬರಲಿಲ್ಲ. ಗ್ರಾಮದೇವತೆಗಳಿಗೆ ಹೊಲೆಯರ ಹಳ್ಳಿಯ ಮೇಲೆ ಯಾವುದೋ ಆಗ್ರಹವು ಉಂಟಾಗಿದೆ ಎಂದು ಭಯಪಟ್ಟರು. ಇದರಿಂದ ತಮ್ಮ ಹಳ್ಳಿಗೆ ಯಾವ ಆಪದವು ಬರುವದೋ ಎಂದು ಅವರೆಲ್ಲರ ಹೃದಯಗಳೂ ಕಂಪಿಸುತ್ತಿದ್ದವು. ಎಲ್ಲಿ ನೋಡಿದರೂ, ಯಾರನ್ನು ನೋಡಿದರೂ ನಂದನನ್ನು ಕುರಿತು ಮಾತನಾಡುವೇ. ಇದನ್ನು ಬಿಟ್ಟು ಮತ್ತೆ ಯಾವ ಧ್ಯಾನವೂ ಯಾರಿಗೂ ಇರಲಿಲ್ಲ. ಪುರುಷರೂ, ಸ್ತ್ರೀಯರೂ ಹಿರಿಯರೂ, ಕಿರಿಯರೂ, ಎಲ್ಲರೂ ನಂದನನ್ನು ಹುಚ್ಚು ನಾಯಿಯನ್ನು ಕಾಣುವಂತೆ ಕಾಣುತ್ತಾ ಹತ್ತಿರಕ್ಕೆ ಹೋಗಲು ಕೂಡ ಭಯವನ್ನುಳ್ಳವರಾಗಿ ದೂರದಿಂದಲೇ ಹಿಡಿ ಹೋಗಲು ಮೊದಲಿಟ್ಟರು. ಎಲ್ಲರೂ ಕಲೆತು ಕಾಟೇರಿಯ ದೇವಾಲಯದ ಬಳಿಗೆ ಹೋಗಿ, ರಣಧ್ವನಿಯನ್ನು ಮಾಡುತ್ತಾ, ಕೋಳಿಗಳನ್ನೂ, ಮರಿಗಳನ್ನೂ ಬಲಿಯಾಗಿ ಕೊಡಲು ತೆಗೆದುಕೊಂಡು ಬಂದರು.

ನಂದನನ್ನು ಕೂಡ ಗ್ರಾಮದೇವತೆಯ ಗುಡಿಗೆ ಎಳೆದುಕೊಂಡು ಹೋದರು. ನಂದನ ಕೈಕಾಲುಗಳನ್ನು ಹಗ್ಗಗಳಿಂದ ಬಿಗಿದು ದೇವತಾನಿಗ್ರಹದ ಎದುರಿನಲ್ಲಿ ಕೂಡಿಸಿದರು. ಆಗ ನಂದನನ್ನುತ್ತಾನೆ:— "ನಾನು ಹುಚ್ಚನಲ್ಲ, ನಟರಾಜಸ್ವಾಮಿಯ ದರ್ಶನಕ್ಕಾಗಿ ನಾನು ತಪಿಸುತ್ತಲಿದ್ದೇನೆ. ನಾನು ಚಿದಂಬರಕ್ಕೆ ಹೋಗಬೇಕು. ಅಲ್ಲಿಗೆ ಹೋದಲ್ಲಿ ನನಿಗೆ ಸ್ವಸ್ಥತೆಯೂ, ಶಾಂತತೆಯೂ ಪ್ರಾಪ್ತವಾಗುವದು. ನಿಮಗೆ ನನ್ನ ಪ್ರಾರ್ಥನೆ ಏನೆಂದರೆ:—ನನಗಾಗಿ ನೀವು ಈ ಕುರಿಗಳನ್ನೂ, ಕೋಳಿಗಳನ್ನೂ, ನಿಷ್ಕಾರಣವಾಗಿ ಕೊಂದು ಪಾಪವನ್ನು ಕಟ್ಟಿಕೊಳ್ಳಬೇಡಿರಿ. ಅಣ್ಣಂದಿರಿರಾ! ಪಾಪಕ್ಕೆ ಈಡಾಗಬೇಡಿರಿ, ಬೇಡಿರಿ."

ನಂದನು ಎಷ್ಟು ಬಗೆಯಲ್ಲಿ ಮೊರೆಯಿಟ್ಟರೂ ಲಾಭವಿಲ್ಲದೆ ಹೋಯಿತು. ನಾಲ್ಕು ಐದು ಮಂದಿ ಕಲೆತು, ದೇವಾಲಯದ ಗೋಪುರದ ಎದುರುಭಾಗಕ್ಕೆ ಸಮವಾಗಿ ನಂದನನ್ನು ಕೂಡಿಸಿ ಬಿಗಿಹಿಡಿದು, ಅಲ್ಲಿಯೇ ಕುರಿಗಳನ್ನೂ, ಕೋಳಿಗಳನ್ನೂ ಕಡಿದರು ಮತ್ತು ಆ ಜಂತುಗಳ ರಕ್ತವನ್ನು ನಂದನ ಮೇಲೆ ಪ್ರೋಕ್ಷಿಸಿದರು. ಆಗ ನಂದನ ಪ್ರಾಣವು ದಬದಬ ಹೊಡೆದುಕೊಳ್ಳುತ್ತಿತ್ತು. ಏನು ಮಾಡಾನು? ಯಾವಚ್ಛಕ್ತಿಯನ್ನು ಉಪಯೋಗಿಸಿ ಕಟ್ಟುಗಳನ್ನು ಬಿಡಿಸಿಕೊಂಡು ಎದ್ದು "ನಟರಾಜನು ನಿಮ್ಮ ಪಾಪಗಳಿಂದ ನಿಮ್ಮನ್ನು ಕ್ಷಮಿಸಲಿ. ನಿಮ್ಮ ಪಾಪಗಳಿಗೆ ನೀವು ಎಂದಾದರೂ ಪಶ್ಚಾತ್ತಾಪ ಪಡುವಂತೆ ನಟರಾಜನು ನಿಮಗೆ ಅನುಗ್ರಹಿಸಲಿ" ಎನ್ನುತ್ತಾ ಹಿಡಿ ಹೋದನು.

ಏನೇನು ಎಷ್ಟೆಷ್ಟು ಮಾಡಿದರೂ ನಂದನ ಹುಚ್ಚು ಹೋಗುವಂತೆ ಕಾಣಲಿಲ್ಲ. ಒಬ್ಬನಿಂದ ಎಲ್ಲರ ಕೆಲಸಕಾರ್ಯಗಳೂ ನಿಂತುಹೋದವು. ಹೊಲೆಯರ ಹಳ್ಳಿಯಲ್ಲಿ ಎಲ್ಲರ ಮನಸ್ಸಿನಲ್ಲಿಯೂ ಯಾವದೋ ಒಂದು ಅನಿರ್ವಚನೀಯವಾದ ಹೆದರಿಕೆಯು ಆವರಿಸಿಕೊಂಡಿತು. ಏನು ಮಾಡಬೇಕೋ ತಿಳಿಯಲಿಲ್ಲ. ಹೊಲೆಯರ ಹಿರಿಯರೆಲ್ಲರೂ ಕಲೆತು ನಂದನ ಯಜಮಾನನ್ನು ಸಮೀಪಿಸಿ ನಂದನಿಗೆ ಹುಚ್ಚು ಹಿಡಿದಿದೆ ಎಂದು ತಿಳಿಸಿದರು.

ಅದು ಕೂಯ್ಲು ದಿನ ಎಲ್ಲರಿಗೂ ಹೆಚ್ಚು ಕೆಲಸ ವಿರುವಕಾಲ. ನಂದನ ಯಜಮಾನನು ಈ ಮಾತು ಕೇಳಿ ಉರಿದುಬಿದ್ದನು. "ಈ ಸಮಯದಲ್ಲಿ ಒಂದು ಮಳೆ ಬಿದ್ದಲ್ಲಿ ಬೆಳೆದು ಸಿದ್ಧವಾಗಿರುವ ಫಸಲೆಲ್ಲಾ ಹಾಳಾಗುವದು. ಮೊದಲು ನನ್ನ ಕೆಲಸ ಸರಿಹೋಗಬೇಕು. ಅದು ಹುಚ್ಚಲ್ಲ, ಸೋಮಾರಿತನ. ಅಷ್ಟೇ ಅಲ್ಲ ಅಭಿಮಾನ, ಅಹಂಕಾರ. ಇದರ ರಹಸ್ಯವೆಲ್ಲವೂ ನನಗೆ ಗೊತ್ತುಂಟು" ಎಂದನು ಯಜಮಾನನು. "ಬುದ್ಧೀ! ಹೇಗಾದರೂ ನೀವೇ ದಾರಿಗೆ ತರಬೇಕು ಇವನನ್ನು. ನಮಿಗೇನೂ ತೋರದೆ ಇದೆ. ಇವನಿಂದ ನಮ್ಮ ಕೆಲಸಗಳೆಲ್ಲಾ ನಿಂತುಹೋದವು. ನಮ್ಮ ಶಕ್ತಿ ವಂಚನೆಯಿಲ್ಲದೆ ಪ್ರಯತ್ನ ಪಟ್ಟೆವು. ಲಾಭವಿಲ್ಲದೆ ಹೋಯಿತು. ತಾವು ಇವನಿಗೆ ಬೇಡಿಹಾಕಿಸುತ್ತೀರೋ, ಬಾರುಕೋಲಿನಿಂದ ಹೊಡಿಸುತ್ತೀರೋ, ಇನ್ನು ಯಾವ ಮಾರ್ಗವನ್ನು ಕಂಡುಹಿಡಿಯುತ್ತೀರೋ, ನಿಮ್ಮ ಇಷ್ಟ. ಕೊಠಡಿಯಲ್ಲಿ ಹಾಕಿ ಬೀಗಹಾಕಿಸಿರಿ. ಕಾಲಿಗೆ ಸಂಕೋಲೆಗಳನ್ನು ಹಾಕಿಸಿರಿ. ನಿಮ್ಮ ಇಷ್ಟದೇವರೂ, ನಿಮಗೇ ಎಲ್ಲವನ್ನೂ ಬಿಟ್ಟಿರುತ್ತೇನೆ" ಎನ್ನತ್ತಾ ಹೊಲೆಯ ಪ್ರಮುಖರೆಲ್ಲರೂ ನಂದನ ಯಜಮಾನನಲ್ಲಿ ಮೊರೆಯಿಟ್ಟುಕೊಂಡರು.

ಬ್ರಾಹ್ಮಣನಿಗೆ ನಂದನ ಮೇಲೆ ಹಿಡಿಯಲಾರದಷ್ಟು ಕೋಪಬಂದಿತು. ಕ್ರೋಧಾವೇಶದಿಂದ ಆಪಾದ ಮಸ್ತಕದವರೆಗೂ ನಡಗುತ್ತಿತ್ತು. "ಜುಟ್ಟು ಹಿಡಿದು ಕೊಂಡು ಅವನನ್ನು ಇಲ್ಲಿಗೆ ಎಳೆದುಕೊಂಡು ಬನ್ನಿ, ಚಂಡಾಲನನ್ನು. ಆಮೇಲೆ ನಾನೇ ಹೇಳುತ್ತೇನೆ ಅವನಿಗೆ" ಎಂದು ಘರ್ಜಿಸಿದನು.

ಈ ದುರ್ಭರಾವಸ್ಥೆಯಲ್ಲಿ ನಂದನಿಗೆ ಮನೆಯಲ್ಲಿ ನಿಲ್ಲುವದೇ ಅಸಂಭವವಾಯಿತು. ಯಾವದು ಹೇಗಿದ್ದರೂ ಚಿದಂಬರಯಾತ್ರೆಯನ್ನು ಮಾಡಿ ಮುಗಿಸಲೇ ಬೇಕೆಂದು ನಿರ್ಧಾರಮಾಡಿಕೊಂಡನು. ಇನ್ನು ಆಲಸ್ಯಕ್ಕೆ ಎಷ್ಟುಮಾತ್ರವೂ ಅವಕಾಶವಿಲ್ಲವೆಂದು ಅಂದುಕೊಂಡು ಯಜಮಾನನ ಅನುಜ್ಞೆಯನ್ನು ಪಡೆಯಲಿಕ್ಕಾಗಿ ಮನೆಯಿಂದ ಹೊರಟು ಬರುತ್ತಿದ್ದಾನೆ. ಬ್ರಾಹ್ಮಣನ ಮನೆಯಿಂದ ಹಿಂತಿರುಗಿ ಬರುತ್ತಿದ್ದ ಹೊಲೆಯ ಹಿರಿಯರು ದಾರಿಯಲ್ಲಿ ನಂದನಿಗೆ ಎದುರಿನಲ್ಲಿ ಬಂದರು. ನಂದನೊಂದಿಗೆ ಕಲೆತು ಮರಳಿ ಅವರೂ ಯಜಮಾನನ ಮನೆಗೆ ಹೊರಟರು.

ಬ್ರಾಹ್ಮಣನು ನಂದನನ್ನು ಕಂಡು ಉರಿದು ಬೀಳುತ್ತಾ ಹೀಗೆ ಅನ್ನುತ್ತಾನೆ:—"ಏನೋ? ಏನು ಈ ಗಲಾಟೆಯೆಲ್ಲಾ? ನಿನಗೆ ಹುಚ್ಚು ಹಿಡಿದಿದೆ ಎನ್ನುತ್ತಿದ್ದಾರೆ. ಇವರೆಲ್ಲರನ್ನೂ ನಾನು ಚನ್ನಾಗಿ ಬಲ್ಲೆ. ಇದು ಹುಚ್ಚಲ್ಲ. ಅಹಂಕಾರ, ಗರ್ವ, ಮದ, ನಿನ್ನ ಗರ್ವವನ್ನೆಲ್ಲಾ ಹುಟ್ಟಡಗಿಸಿಬಿಡುತ್ತೇನೆ ಕಾಣೋ! ಜಾಗ್ರತೆ!

ನಂದನು ಸಮಾಧಾನವಾಗಿ ಹೀಗೆ ಉತ್ತರ ಕೊಡುತ್ತಾನೆ:—ನನ್ನನ್ನು ಯಾವದು ಹಿಡಿದಿದೆಯೋ ನಾನರಿಯೆ. ನಟರಾಜರ ದಯೆ, ಪ್ರೇಮಗಳನ್ನು ಕುರಿತು ಕೇಳಿದಂದಿನಿಂದ ಆ ಮಹಾದೇವನನ್ನು ನೋಡಬೇಕೆಂಬ ಕೋರಿಕೆಯಿಂದ ಮನಸ್ಸು ತಲ್ಲಣಿಸುತ್ತಲಿದೆ. ನಾನು ಈಗ ಅಲ್ಲಿಗೆ ಹೋಗಿ ನನ್ನನ್ನು ನಾನು ಅತನಿಗೆ ಸಮರ್ಪಣೆ ಮಾಡಬೇಕು. ಈಚೆಗೆ ನನ್ನಲ್ಲಿ ಈ

ವರ್ತಮಾನಗಳು

ರೈಲು ಪ್ಲೇನು.

ರೈಲು ಪ್ರಯಾಣವೆಂದರೆ ಬಹಳ ನಿಧಾನ. ವಿಮಾನದಲ್ಲಿ ಪ್ರಯಾಣ ಮಾಡುವುದೆಂದರೆ ಹೆಚ್ಚು ಅಪಾಯಗಳ ಭಯವಿರುತ್ತದೆ ರೈಲು ಭೂಮಿಯ ಮೇಲೆ ನಡೆಯುವದಾದುದರಿಂದ ರಸ್ತೆಗಳನ್ನು ದಾಟಿಕೊಂಡು ಹೋಗಬೇಕಾಗಿರುವ ಸ್ಥಳಗಳಲ್ಲಿ ಜನರಿಗೂ, ಗಾಡಿಗಳಿಗೂ ಬಹಳ ತೊಂದರೆಯುಂಟಾಗುತ್ತದೆ. ಈ ಕಷ್ಟಗಳನ್ನು ತೊಲಗಿಸಲು ಈಚೆಗೆ ರೈಲ್‌ಪ್ಲೇನ್ ಎಂಬುದೊಂದು ಹೊಸ ಪ್ರಯಾಣ ಸಾಧನವನ್ನು ಕಂಡುಹಿಡಿದಿರುವರು. ಇದು ಹೆಚ್ಚು ವೇಗದಲ್ಲಿ ಹೋಗಬಲ್ಲದು. ಯಾರಿಗೂ ಯಾವ ಬಗೆಯ ತೊಂದರೆಯೂ ಇರುವದಿಲ್ಲ. ವಿಮಾನಗಳ ವೇಗದಲ್ಲಿ ಹೋಗಬಹುದು. ಭೂಮಿಯಲ್ಲಿ ಕಂಭಗಳನ್ನು ನೆಟ್ಟು ಅವುಗಳ ಮೇಲೆ ಸೇತುವೆಯಹಾಗೆ ಕಟ್ಟಿ ಆ ಸೇತುವೆಯ ಮೇಲೆ ಬಂದು ರೈಲು ಕಂಬಿಯು ಜೋಡಿಸಲ್ಪಡುವುದು. ರೈಲುಪ್ಲೇನು ಈ ಕಂಬಿಯ ಮೇಲೆ ಹೋಗುವುದು. ರೈಲುಪ್ಲೇನಿನ ಈ ನೇಲ್ಬಾಗದಲ್ಲಿ ಮತ್ತೊಂದು ರೈಲು ಕಂಬಿಯು ರೈಲುಪ್ಲೇನನ್ನು ಒಂದೇ ಸ್ಥಿತಿಯಲ್ಲಿ ನಡೆಯುವಂತೆ ಮಾಡುವುದು. ಈ ಪ್ಲೇನಿನಲ್ಲಿ ಒಂದು ಸಾರಿಗೆ 100 ಮಂದಿ ಪ್ರಯಾಣ ಮಾಡಬಹುದು. ರೈಲುಪ್ಲೇನಿನ ಆಕಾರವು ವಿಮಾನದಂತೆಯೇ ಇರುತ್ತದೆ. ಪ್ರಯಾಣಿಕರ ಸಂಖ್ಯೆಯು ಬಹಳ ಹೆಚ್ಚಾಗಿರುವ ಸ್ಥಳಗಳಲ್ಲಿ ಈ ಬಗೆಯ ಸೌಲಭ್ಯವನ್ನು ಕಲ್ಪಿಸಲು ಸರ್ಕಾರದವರು ಯತ್ನಿಸುವದು ಉಚಿತವು.

ಇಡೀ ಪ್ರಪಂಚದಲ್ಲಿ ಸಣ್ಣ ರೈಲು.

ಇದು ಕೆಂಟಿಷ್ ತೀರದಲ್ಲಿ ಹೈತ್ ಮತ್ತು ಹೊಸ ರೋಮ್ನಿಗಳ ನಡುವೆ ಇದೆ. ಅದರ ರೈಲುಗಳ ನಡುವಿನ ಅಳತೆ 15 ಅಂಗುಲ. ಆದರೆ ಅದು ಆಟದ ಸಾಮಾನೆಂದು ತಿಳಿಯಬಾರದು. ಸಾವಿರಗಟ್ಲೆ ಪ್ರಯಾಣ ಮಾಡುವರು; ಅನೇಕ ಸಾಮಾನುಗಳು ಸಾಗಿಸಲ್ಪಡುವವು. ಅದು 1927 ನೆ ಇಸವಿಯಲ್ಲಿ ಜನರ ಉಪಯೋಗಕ್ಕೆ ತೆರೆಯಲ್ಪಟ್ಟಿತು. ಅದರ ಮೂಲಕಾರಣರು ಕ್ಯಾಪ್ಟನ್ ಹೂವೆ ಎನ್ನುವರು. ಈ ರೈಲು ದಾರಿಯ ಉದ್ದ ಸುಮಾರು 8 ಮೈಲು; ಗಂಟೆಗೆ 25 ಮೈಲಿಗಳಂತೆ ಈ ರೈಲು ಹೋಗಬಲ್ಲದು. ಪ್ರತಿ ರೈಲಿನಲ್ಲಿಯೂ 200 ಮಂದಿ ಪ್ರಯಾಣ ಮಾಡಲು ಸ್ಥಳವಿರುತ್ತದೆ. ಈ ರೈಲಿನಿಂದ ಕಂಪೆನಿಯವರಿಗೆ ಲಾಭ ಹೆಚ್ಚು. ಖರ್ಚು ಕಡವೆ. ಇಂತಹ ರೈಲುದಾರಿಗಳನ್ನು ಇಂಡಿಯಾದಲ್ಲೂ ಹಾಕುವುದು ಒಳ್ಳೇದು.

ದಾಹವು ಕ್ಷಣಕ್ಷಣಕ್ಕೂ ದಿನದಿನಕ್ಕೂ ಹೆಚ್ಚುತ್ತಲೇ ಇರುತ್ತಲೇ ಇದೆ ಈ ದಾಹವನ್ನು ಅಡಗಿಸಿಕೊಳ್ಳಲಾರದಷ್ಟು ಅಪರಿಮಿತವಾಗಿ ಹೆಚ್ಚುತ್ತಲಿದೆ. ಮನಸ್ಸು ಇಲ್ಲಿಲ್ಲ. ತಮಗೆ ನಾನು ಮಾಡಿಕೊಳ್ಳುವ ಪ್ರಾರ್ಥನೆ ಇಷ್ಟೇ.—ನನಗೆ ಕೆಲವು ದಿವಸಗಳು ಮಾತ್ರ ರಜವನ್ನು ಕೊಟ್ಟು ಚಿದಂಬರಕ್ಕೆ ಕಳುಹಿಸಬೇಕೆಂದು. ನಾನು ಪುನಃ ಬಂದನಂತರ (ಹಾಗೆ ಪುನಃ ಬರುವ ಪ್ರಾರಬ್ಧವಿದ್ದಪಕ್ಷದಲ್ಲಿ) ನಿಮ್ಮಲ್ಲಿಯೇ ಸೇರಿ ಮೊದಲಿನಂತೆಯೇ ಕೆಲಸಕಾರ್ಯಗಳನ್ನು ಮಾಡುತ್ತಾ ಬರುವೆನು.

[ಸಶೇಷ

THE

Weekly Newspaper

SATYAVADI

Every Wednesday

MYSORE (Founded 1917) 27—3—35

Government of Mysore

ಕಂಟ್ರೋಲರವರ ಕಛೇರಿ, ಬೆಂಗಳೂರು.

ನೋಟೀಸು

ಇರೇಬಿನಲ್ಲಿ ನಮೂದಾಗಿರುವ ಬಗೆಗಳ ಮೈಸೂರು ಸರ್ಕಾರದ ಸಾಲಪತ್ರಗಳನ್ನೂ ಮತ್ತು ಫಿಕ್ಸೆಡ್ ಡಿಪಾಜಿಟ್ ರಸೀತಿಗಳನ್ನೂ ಮೈಸೂರು ಸರ್ಕಾರದ ಕಂಟ್ರೋಲರವರು ಯಾರಿಂದ ಬೇಕಾದರೂ ಸ್ವೀಕರಿಸಿ, ಅದಕ್ಕೆ ಪ್ರತಿಯಾಗಿ ಶೇಕಡ 4 ರಂತೆ ಬಡ್ಡಿಯುಳ್ಳ 1953--63 ರ ಸಾಲಪತ್ರಗಳನ್ನು ಕೊಡುತ್ತಾರೆ. ಈ ಸಾಲಪತ್ರಗಳೊಡನೆ ಕ್ಲುಪ್ತ ದರದಲ್ಲಿ ಬೋನಸ್ಸು ಮೊಬಲಗನ್ನೂ, ಬಡ್ಡಿಯನ್ನೂ ಸಹ ಕೊಡುತ್ತಾರೆ. ಮತ್ತೊಂದು ಅಂಶವೇನೆಂದರೆ :—1953--63 ರ ಈ ಸಾಲಪತ್ರಗಳ ಬಡ್ಡಿಯ ಮೊತ್ತದ ಮೇಲೆ ವರಮಯಸದ ತೆರಿಗೆಯನ್ನು ಕೊಡಬೇಕಾಗಿಲ್ಲ. ಅಂಗೀಕೃತರಾದ ದಳ್ಳಾಳಿದಾರರಿಗೂ ಮತ್ತು ಬ್ಯಾಂಕರುಗಳಿಗೂ, ಅವರ ಮೂಲಕ ವ್ಯವಹರಿಸಲಕ್ಕ ಸಾಲಪತ್ರಗಳ ಮತ್ತು ಫಿಕ್ಸೆಡ್ ಡಿಪಾಜಿಟ್ ರಸೀತಿಗಳಮೇಲೆ ಪ್ರತಿ ನೂರು ರೂಪಾಯಿಗಳಿಗೆ ಒಂದಾಣೆಯಂತೆ ದಳ್ಳಾಳಿ ಕೊಡಲಾಗುವುದು. ಹೆಚ್ಚು ವಿವರಗಳನ್ನು ತಿಳಿಯಲಪೇಕ್ಷಿಸುವವರು " ಮೈಸೂರು ಸರ್ಕಾರದ ಕಂಟ್ರೋಲರವರು, ಬೆಂಗಳೂರು " ಇವರಲ್ಲಿಗೆ ದಯೆಯಿಟ್ಟು ಮನಮಾಡಿ ತಿಳಿದುಕೊಳ್ಳಬಹುದು.

ಶೇಕಡ ೫ || ಬಡ್ಡಿಯುಳ್ಳ 1938 ರ ಸಾಲಪತ್ರಗಳು
ಶೇಕಡ ೬ | ಬಡ್ಡಿಯುಳ್ಳ 1949 ರ ಸಾಲಪತ್ರಗಳು
ಶೇಕಡ ೬ || ಬಡ್ಡಿಯುಳ್ಳ 1941-51 ರ ಸಾಲಪತ್ರಗಳು
ಶೇಕಡ ೫ || ಬಡ್ಡಿಯುಳ್ಳ ಏಳು ವರ್ಷಗಳ ಕಾಲಾವಧಿಯ ಸೇವಿಂಗ್ಸ್ ಬ್ಯಾಂಕ್ " ಫಿಕ್ಸೆಡ್ ಡಿಪಾಜಿಟ್ " ರಸೀತ್ತಿಗಳು.

ಎ. ಎಸ್. ರಾಘವಾಚ್'ರ್
ಮೈಸೂರು ಸರ್ಕಾರದ ಕಂಟ್ರೋಲರು.

ಪೂರೀ ಜಿಲ್ಲಾಕ್ಕೆ ಸೇರಿದ ಒಂದು ಗ್ರಾಮದಲ್ಲಿ ಚಿರಂತ್ರಕಾಂತನೆಂಬ ಸನ್ಯಾಸಿ ಇರುವನು. ಅವನಿಗೆ ಸ್ವಪ್ನದಲ್ಲಿ ನೇಪಾಳೆಯು ಪ್ರತ್ಯಕ್ಷವಾಗಿ ಪ್ರಾಚೀನ ಕಾಲದ ಫಿರಂಗಿಗಳು ಒಂದು ಕಡೆ ಇರುವವೆಂದೂ, ಅಲ್ಲಿ ಅಗೆದಲ್ಲಿ ನಿಧಾನಬರುವವೆಂದೂ ತಿಳಿಸಿತು. ಸನ್ಯಾಸಿಯು ಈ ವಿಷಯವನ್ನು ಅಧಿಕಾರಿಗಳಿಗೆ ತಿಳಿಸಲು ಅವರು ಅಲ್ಲಿ ಅಗೆಯಲು 5 ಫಿರಂಗಿಗಳು ಕಾಣಬಂದಿರುವವು.

ಕೆಲವು ಕೇಸುಗಳಲ್ಲಿ ಲಂಚವನ್ನು ತೆಗೆದುಕೊಂಡ ಮೂವರು ಜಡ್ಜಿಯವರು ಸರ್ವಿಯಾ ದೇಶದಲ್ಲಿ ಪದಚ್ಯುತರಾಗಿ ಮಾಡಲ್ಪಟ್ಟರು. ಮತಗುರುಗಳು ಕೂಡ ಇವರ ವರ್ತನೆಯನ್ನು ಖಂಡಿಸಿದರು. ಯಾವ ನೌಕರನಾಗಲಿ, ದೊಡ್ಡ ನೌಕರನಾಗಲಿ, ಲಂಚವನ್ನು ತಿನ್ನುವವರೆಲ್ಲರನ್ನೂ ಪದಭ್ರಷ್ಟರಾಗಿಮಾಡಿ, ಮತದಿಂದ ಹೊರಗೆ ಹಾಗುವದು ಒಳಿತು ಮುಖ್ಯವು. ಅಂಥವರು ಸಮಾಜಕ್ಕೆ ಕಂಟಕಪ್ರಾಯರೇ ಸರಿ.

ಹುಬ್ಬಳ್ಳಿಯಲ್ಲಿ ಪ್ರತಿ ಸೋಮವಾರ ಪ್ರಕಟವಾಗುವ

ದೇಶಬಂಧು

ಪತ್ರಿಕೆಯನ್ನು ಓದಿ ಆನಂದಪಡಿರಿ.
ವಿವಿಧ ವರ್ತಮಾನಗಳ ಭಂಡಾರವಿದು. ತಾತ್ಕಾಲಿಕ ಮುಖ್ಯ ವಿಷಯಗಳ ಗಣಿಯಿದು. ವಿನೋದಸಲಾಸಗಳ ಬೀಡಿದು. ವಾರ್ಷಿಕ ಚಂದಾ ರೂ 2--0 -0
ವಿಳಾಸ—ಸಂಪಾದಕ ದೇಶಬಂಧು ಹುಬ್ಬಳ್ಳಿ

ಈಗ ಬೊಂಬಾಯಿಗೆ ಬಂದಿರುವ ಅಮೇರಿಕದ ಕೋಟ್ಯಾಧೀಶ್ವರನಾದ ಮೆ. ಕ್ರೋಮ್‌ವೆಲ್ ಎಂಬಾತನು ಇಂಡಿಯದ ಬಡತನಕ್ಕೆ ಬೇಂಕ್ ಆಪ್ ಇಂಗ್ಲೆಂಡೇ ಕಾರಣವೆಂದು ಸಾರುತ್ತಿದ್ದಾನೆ.

ರಷ್ಯದಲ್ಲಿ ಹೊಸ ಸರ್ಕಾರವು ಏರ್ಪಾಡಾಗುವದಕ್ಕೆ ಪೂರ್ವದಲ್ಲಿ ದೇಶವನ್ನು ಬಿಟ್ಟು ಹೋದವರ ಉಪಯೋಗಾರ್ಥವಾಗಿ ಆ ಸರ್ಕಾರದವರು ಕೆಲವು ನಿಯಮಗಳನ್ನು ಪ್ರಚುರಮಾಡಲು ಏರ್ಪಾಡು ಮಾಡಿರುವರು

ಸೋವಿಯಟ್ ರಷ್ಯದಲ್ಲಿ ಭಿಕ್ಷುಕರು ಇಲ್ಲದಂತೆ ಮಾಡಿದ್ದಕ್ಕೆ ಅನೇಕರು ರಷ್ಯಾವನ್ನು ಪ್ರಶಂಸಿಸುತ್ತಾ, ಅತಿ ಶೀಘ್ರಕಾಲದಲ್ಲಿ ರಷ್ಯಾವು ಅತ್ಯುನ್ನತ ಸ್ಥಿತಿಗೆ ಬರುವದೆಂದು ಇತರ ದೇಶದ ಪ್ರಮುಖರು ಭಾವಿಸುತ್ತಿರುವರು.

ದಕ್ಷಿಣ ಆಫ್ರಿಕಾದ ರಾಜತಂತ್ರವಿಶಾರದ ಜನರಲ್ ಸ್ಮಟ್'ರವರು ಮುಂದಿನ ವೈಸರಾಯರಾಗಿ ನಿಯಮಿಸಲ್ಪಡಬಹುದೆಂದು, ಅವರು ಒಸ್ಮದಿದ್ದಲ್ಲಿ ಬಂಗಾಳ ಗೌರ್ನರಾದ ಜನರಲ್ ಆಂಡರ್‌ಸನ್'ರವರು ನಿಯಮಿಸಲ್ಪಡಬಹುದೆಂದು ವರ್ತಮಾನ ಹರಡಿರುವುದಾಗಿ ತಿಳಿಯಬಂದಿದೆ.

ಚಕ್ರವರ್ತಿ ಸಾರ್ವಭೌಮರ ಸಿಲ್ವರ್ ಜೂಬಿಲಿ ಸ್ಮಾರಕದ ಬೆಳ್ಳಿಯ ಮೆಡಲುಗಳು ಎರಡು ಸೈಜುಗಳಲ್ಲಿ ತಯಾರಾಗಿ ದೊಡ್ಡದಕ್ಕೆ 35 ರೂಪಾಯಿನಂತೆ, ಚಿಕ್ಕದಕ್ಕೆ 1--12--0 ರೂಪಾಯಿನಂತೆ ನೂರಾಟಕ್ಕೆ ಧೊರೆಯುವುವು. ಏಪ್ರಿಲ್ ತಾ|| 15 ರಿಂದ ಇದರ ಮಾರಾಟ. ಅಪೇಕ್ಷಕರು ಕಲ್ಕತ್ತೆಯ ಮಿಂಟಿನ ಮಾಸ್ಟರರಿಗೆ ಬರೆಯತಕ್ಕದ್ದು.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore

Shiromani NARAYANACHARYA
Chowkambha, Benarese.

S.U.N. & CO. BENARES CITY.

ಶಾಸ್ತ್ರಿಗಳೇ ! ಪೂರ್ವಕಾಲದವರು ಆರೋಗ್ಯವಂತರೇ ಆಗಿದ್ದರು ಎಂಬುದು ನಿಜವೇ ? ರಾಮಾಯಣ್ಣ ಮಹಾಭಾರತಗಳನ್ನು ಬರೆದವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು ? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯ ರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರಿಗೆ ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ ರೂ 50 ರವರೆಗೆ ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರಿಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರಿಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು : 1 ವಿಶ್ವೇಶ್ವರ ಪಟ, 1 ಕಾಶೀಸಕ್ಷೇ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ [ಕಾಶಿ]

ಅರುಣೋದಯ

ರಾಷ್ಟ್ರೀಯ ವಾರಪತ್ರಿಕೆ

ಇದುಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳ ಅಮೌಲ್ಯ ಲೇಖನಗಳಿಂದಲೂ, ರಸಭರಿತನಾದ ಕವಿತೆ ಮತ್ತು ಕಥೆಗಳಿಂದಲೂ, ಮತ್ತು ಪ್ರಪಂಚದಲ್ಲಿ ನಡೆಯುತ್ತಿರುವ ಮಹತ್ವದ ಸಂಗತಿಗಳಿಂದಲೂ ಕೂಡಿದಾಗಿದೆ. ಇಡೀ ಕರ್ನಾಟಕದಲ್ಲೆಲ್ಲಾ ಇದರ ಪ್ರಚಾರವಿರುವುದು. ವಾರ್ಷಿಕ ಚಂದಾ ರೂ 2-8--0
ವಿ. ಪಿ. ರೂ 2--12--0 ಮ್ಯಾನೇಜರ್,
" ಅರುಣೋದಯ " ಬೆಳಗಾಂ

H. S. KAMAL SHERIFFDENTIST
Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entiresatisfction.